# ಗೆದ್ದಲು ಬರೆದ ಕವಿತೆ

ಅಟ್ಟದ ಮೇಲೆ ಗೆದ್ದಲು ಹಿಡಿದ
ಪುಸ್ತಕವೊಂದು ತನ್ನನ್ನು ತಾನೇ
ಓದುತ್ತಿದೆ ಆದರೂ ಕತೆ ಮುಗಿದಿಲ್ಲ...
ಮಾನವನ ಇತಿಹಾಸವನ್ನೂ
ಗೆದ್ದಲು ಹಿಡಿಸಬಲ್ಲುದು

ಈ ಗೆದ್ದಲು

ಮೂಲೆಗೆ ಬಿದ್ದ ಅಜ್ಜನ ಊರುಗೋಲಿನ
ಹಿಡಿಕೆ ಹಿಡಿಯಲು ಮೇಲೆಹತ್ತಿದೆ
ಪಾತಾಳದಿಂದೆದ್ದಂತೆ ಆಳೆತ್ತರಕ್ಕೆ
ಬೆಳೆದು ಜಂತಿ ತಲುಪಿದೆ

ಹಗಲು ನೋಡದ ನೊಗ
ನೇಗಿಲು ಕುಂಟೆ ಹಲುಬೆಯೆಲ್ಲಾ
ಉತ್ತುಬಿತ್ತದ ಹಾದಿಯಲ್ಲಿ
ಗೆದ್ದಲ ಹೊದ್ದು ಮಲಗಿವೆ


ಜೀವ ತೊರೆದ ಹಳೆಯ ಮರ
ಗಾಳಿಗುರುಳಿದರೆ
ಮಳೆಯಲಿ ತೊಳೆದುಕೊಂಡ
ಗಿಡವು ಮತ್ತೆ ಚಿಗುರಿದೆ

ಮಣ್ಣೊಳಗೆ ಮಲಗಿಸಿದವನ
ಸುತ್ತಲೂ ಪದಗಳ ಸಾಲ
ಬರೆಯ ಹೊರಟಿವೆ
ತೋಟ ಸಾಲ ಬೇಲಿಯಲ್ಲಿ
ಹುಲ್ಲು ಸೋಗೆಗಳ ನುಂಗಿ ನೊಣೆದು
ಮುಳ್ಳು ಕಂಬ ಒಡಲುಗೊಂಡು
ಕಡದಿಟ್ಟ ಶಿಲ್ಪದಂತೆ ಹುತ್ತ ಕಟ್ಟಿವೆ

ಸೃಷ್ಟಿಗೊಂಡ ವಸ್ತುವೆಲ್ಲಾ ಹಾಗೇ
ಉಳಿದರೆ ಚಟ್ಟ ಪಳೆಯುಳಿಕೆ
ಭೂಮಿ ಮೇಲೆ ರಾಶಿರಾಶಿ
ಹುಟ್ಟಿ ಬರುವ ಹೊಸತಿಗೆಲ್ಲಿ
ಮೂಲ ದ್ರವ್ಯರಾಶಿ

ಗೆದ್ದಲದುವು ಲೋಕದ
ಗೆದ್ದಲಿಗೆ ಅಂಜದೇ
ಮಣ್ಣ ಘಮಲು ಹಿಂಗುವಂತೆ
ಕರಗಿಸಿ ಕೊನರದ ಕೊರಡನೂ
ಹಿಡಿಮಣ್ಣಿಗೂ ಜೀವತುಂಬುವ
ಗೆದ್ದಲು ಮುರಿದು ಕಟ್ಟುವ
ಕವಿಯಲ್ಲವೇ!

● ಆರ್.ಯು. ಅಭಿಷೇಕ್



ನಾಗೇಶ ಹೆಗಡೆ